★★★

ಎಲ್ಲ, ಎಲ್ಲವನ್ನೂ ಮರೆತಂತೆ ಬದುಕುತ್ತಿದ್ದ ಆ ಹಟ್ಟಿಯ ಮುಂದೆ ಬೆಳ್ಳಂಬೆಳಗ್ಗೆಯೇ ಉರಿಯುತ್ತಿದ್ದ ಸೂರ್ಯನ ಮುಂದಿಟ್ಟುಕೊಂಡವರಂತೆ ಒಂದಷ್ಟು ಊರ ಮಂದಿ ಪ್ರಪಂಚದ ಬಹಳ ದೊಡ್ಡ ಸುದ್ದಿಯನ್ನು ಅರುಹುತ್ತಿರುವ ಉತ್ಸಾಹದಲ್ಲಿ ಬಾಯಿಬಿಟ್ಟು ನಿಂತಿತ್ತು. ಪಾರೋತವ್ವ ಜಗುಲಿ ಮೇಲೆ ಕುಸಿದು ಕುಂತಿದ್ದಳು. ಎಷ್ಟಾದರೂ ಕಳ್ಳುಬಳ್ಳಿಯ ಸಂಬಂಧ. ಸುತ್ತ ಕುಂತ ಜನ ಮೃತ್ಯೂವಿನ ಸಾವ ಬಗೆಗೆ ಹತ್ತಾರು ಬಗೆಯ ಮಾತುಗಳ ಆಡತೊಡಗಿದ್ದರು. ಮೃತ್ಯುವಿನ ಭೂತ, ವರ್ತಮಾನಗಳೂ ಅಲ್ಲಿ ಬಿಚ್ಚಿ ಹರಡಿಕೊಳ್ಳಲಾರಂಭಿಸಿದವು. 'ಸತ್ತವನ ಕಣ್ಣು ಬಟ್ಟಲಗಣ್ಣು' ಎನ್ನುವರಂತೆ. ಅಂಥಂಥ ಮಾತುಗಳೇ ಅವರಾಡುತ್ತಿದ್ದದ್ದು. ಪಾರೋತವ್ವನಿಗೆ ಯಾಕೋ ಅವೆಲ್ಲ ಪಡಪೋಶಿತನದ, ತಿರುಬೋಕಿತಲೆಯ ಹರಟೆಗಳಂತೆ ಕೇಳಿಸಹತ್ತಿದ್ದವು. ಗೌರಿ ಅದೇ ತಾನೇ ಸ್ನಾನ ಮುಗಿಸಿ ಹೊರ ಬಂದಿದ್ದಳು. "ಅಯ್ಯೋ ಗಂಡನ್ನ ತಿಂದುಕೊಂಡು ಬುಟ್ಯಾ ನನ್ನವ್ವ" ಅಜ್ಜಿಯೊಂದು ಅವಳ ಮೊಖವಾ ತನ್ನ ಒರಟಾದ ಕೈಗಳಿಂದ ಜೋರಾಗಿಯೇ ತಿಕ್ಕಿ ನುಡಿದಿತ್ತು. ಪೆಚ್ಚಾದ ಗೌರಿ ಅವ್ವನತ್ತ ನೋಡಿದರೆ ಅವಳು ಕಣ್ಣೀರು ತುಂಬಿ ಕಾಣದಂತಿದ್ದ ಕಣ್ಣುಗಳಿಂದ ಮಗಳತ್ತ ಭಾವವಿಲ್ಲದ ನೋಟ ಬೀರುತ್ತಾ ಕುಂತಿದ್ದಾಳೆ. ಅವ್ವನ ಕುಂದಿದ ಶಕ್ತಿ ನೋಡಿ, "ಅವ್ವಾ ವಂದಷ್ಟು ಹಾಲ್ ಕಾಯಿಸಿಕೊಡಲಾ?" ಗೌರಿ ಕೇಳಿದ ಪ್ರಶ್ನೆ ಊರವರಿಗೆ ವಿಚಿತ್ರವಾಗಿ ಕೇಳಿತ್ತು. "ಇದೇನಾ ಇದು ಗೌರಿ ನಿನ್ಗಂಡ ಮೃತ್ಯೂ ಸತ್ತೋದ್ನಂತೆ ಅಂತ ಸುದ್ದಿ ಕೊಟ್ಟಿರೋವಾಗ ಅವ್ವಂಗೆ ಆಲ್ ಕೊಡಲಾ ಅಂತ ಕೇಳ್ತಾ ಇದ್ದಯಿ. ಯೆಷ್ಟೇ ಆದ್ರೂ ಅಂವ ನಿನ್ಗಂಡನಲ್ಲವಾ?" ಅಜ್ಜಿ ಭೋಬೇಸರದಿಂದ ನುಡಿದಿತ್ತು. ಗೌರಿ ಎದ್ದು ಹೋದವಳು ಹಾಲು ಕಾಯಿಸಿಕಂಡೇ ತಂದಿದ್ದಳು. ದೊಡ್ಡದೊಂದು ಬೋಸಿ. ಹತ್ತಾರು ಲೋಟಗಳು. "ಹತ್ರ ಇದ್ದೋರು, ಹತ್ರವಾಗಿದ್ದೋರು ಸತ್ರು ಅಂದ್ರೆ ದುಕ್ಕವಾಯ್ತದೆ. ಏನೂ ಅಲ್ದೆ ಇರೋರು ಸತ್ರೆ ದುಕ್ಕ ಎಲ್ಲಿಂದ ಬಂದಾತು. ತಗಳ್ಳಿ ಹಾಲ್ ಕುಡ್ಕಂಡು ಹಟ್ಟಿಗ್ಹೋಗಿ."

ಗೌರಿಯ ಮಾತುಗಳಿಗೆ ಗುಂಪು ದಂಗಾಗಿ ನಿಂತು ಬಿಟ್ಟಿತ್ತು. ಮರುಮಾತು ಹೂಡಲು ಅವರೆಲ್ಲಾರಿಗೂ ಬಾಯಿ ಬಂದಿರಲಿಲ್ಲ.

ಸೂರ್ಯ ಧಗಧಗನೆ ಉರಿವಾಗ, ಗೌರಿ ಕೊಟ್ಟ ಹಬೆಯಾಡುವ ಹಾಲು ಕುಡಿವುದು ಅಲ್ಲಿದ್ದ ಜನಕ್ಕೆ ಕಷ್ಟವೇ ಅನ್ನಿಸಿತ್ತು. ಒಳಗೂ ಧಗೆ, ಹೊರಗೂ ಧಗೆ. ಅರ್ಥವಾದ ಧಗೆ, ಅರ್ಥವಾಗದ ಧಗೆ! ಬೆವರುತ್ತಾ ಇನ್ನೇನೋ ಹಾಲ ಕುಡಿದು ಮುಗಿಸಿ ಮೇಲೆದ್ದೋ ಎನ್ನುವಾಗ ಹಟ್ಟಿಯ ಮುಂದೆ ದೂಳೆಬ್ಬಿಸಿಕೊಂಡು ಕಾರೊಂದು ಬಂದು ನಿಂತಿತ್ತು. ಬಂದ ಮೂರು ಜನ ಮೃತ್ಯೂನ ಗೆಳೆಯರಂತೆ. ಅವರು ಅವನ ಸಾವಿನ ಸುದ್ದಿಗೆ ಅಧಿಕೃತ ಮುದ್ರೆ ಒತ್ತಿದ್ದರು. ಅವರ ಬಳಿ ಇನ್ನೂ ಒಂದಷ್ಟು ವಿವರಗಳಿದ್ದವು. ಮೃತ್ಯು ನೆನ್ನೆಯೇ ಹೃದಯಾಘಾತದಿಂದ ಸತ್ತನಂತೆ. ಈ ಮೂರು ಜನರ ಬಿಟ್ಟರೆ ಯಾರೂ ಅವನನ್ನು ನೋಡಲು ಬರಲಿಲ್ಲವಂತೆ. ಅಣ್ಣಂದಿರು ತಮಗೂ ಅವನಿಗೂ ಸಂಬಂಧವೇ ಇಲ್ಲವೆಂದು ಕೈಯಾಡಿಸಿಬಿಟ್ಟು ಕಳುಹಿಸಿಬಿಟ್ಟರಂತೆ. ಇಟ್ಟುಕೊಂಡಿದ್ದ ಹೆಂಗಸು, "ನಾ ಯಾವ ಜವಾಬ್ದಾರಿ ತಗಳ್ಳಲ್ಲಣ್ಣ. ಹೇಳಿ ಕೇಳಿ ಒಂಟಿ ಹೆಂಗ್ಸು ನಾನು. ಅವರ ಮನೆಯೋರು ನನ್ನ ಸುಮ್ನೆ ಬುಟ್ಟಾರಾ" ಎಂದು ಹೆದರಿಕೊಂಡು ಅತ್ತಳಂತೆ. "ಮೃತ್ಯೂನಾ ಅಕ್ಕಾ, ಹೆಂಡತಿ ಇರುವಾಗ ತಾವು ಯಾಕೆ ಅಬ್ಬೇಪಾರಿಯಂತೆ ಅವನ ಹೆಣ ಎತ್ತಬೇಕು. "ಹೆಂಗಾದರೂ ಆಗಲಿ, ಸುದ್ದಿ ಕೊಟ್ಟು ಬಿಡೋಣವೆಂದು ಬಂದೆವು" ಬಂದವರು ದೇವರು, ಧರ್ಮ, ಕರ್ಮ, ಸಂಪ್ರದಾಯ ಆಚಾರ, ವಿಚಾರ ಎಂಬಿತ್ಯಾದಿ ದೊಡ್ಡ ದೊಡ್ಡ ಪದಗಳ ತಮ್ಮ ಮಾತುಗಳೊಳಗೆ ಬೇಕಾಬಿಟ್ಟಿ ತೂರಿಸುತ್ತಾ ನುಡಿಯುತ್ತಲೇ ಹೋಗಿದ್ದರು. ಅವರ ಮಾತುಗಳ ಅರ್ಥ ಏನೆಂದು ಎಲ್ಲರಿಗೂ ಚೆನ್ನಾಗಿಯೇ ಗೊತ್ತಾಗಿತ್ತು. ಬಹಳ ಹೊತ್ತು ಅಲ್ಲಿ ಮೌನವೇ ತಾಂಡವವಾಡಿತ್ತು.